**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ ೧೩೩/೨೦೧೯** ಪಿ.ಡಬ್ಲ್ಯೂ-೦೮

| | | |
|---|---|---|
| ಹೆಸರು | ಃ | ಮಲ್ಲಿಕಾರ್ಜುನ |
| ತಂದೆಃಗಂಡ | ಃ | ದತ್ತಪ್ಪ |
| ವಯಸ್ಸು | ಃ | ೩೯ ವರ್ಷ |
| ಉದ್ಯೋಗ | : | ಮುಖ್ಯ ಪೇದೆ ಅಫಜಲಪೂರ ಪೋ.ಠಾ. |
| ವಾಸಸ್ಥಳ | ಃ | ಅಫಜಲಪೂರ |

ದಿನಾಂಕಃ ೨೮.೧೦.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಕಲಂ ೨೪೪ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ೨೦೨೧ ರಿಂದ ೨೦೨೨ ವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕಾರ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಆದೇಶದಂತೆ ನಾನು ಆಪಾದಿತ ವ್ಯಕ್ತಿಯ ಹಾಜರಾತಿಯನ್ನು ಅಗತ್ಯ ಪಡಿಸಲು ಉದ್ಘೋಷಣೆಯನ್ನು ದಿಃ೩೦.೦೬.೨೦೨೦ ರಂದು ಹೊರಡಿಸಿರುತ್ತೇನೆ. ಉದ್ಘೋಷಣೆಯನ್ನು ಲಾಡ್ಲೆ ಮಶಾಖ ದರ್ಗಾದ ಹತ್ತಿರ, ಆಳಂದ ಬಸ್ ನಿಲ್ದಾಣದ ಹತ್ತಿರ, ದರ್ಗಾದ ಹತ್ತಿರ ಇಬ್ಬರು ಪಂಚರ ಸಮಕ್ಷಮ ಉದ್ಘೋಷಣೆಯನ್ನು ಹೊರಡಿಸಿ ಉದ್ಘೋಷಣೆಯನ್ನು ಜಾರಿ ಮಾಡಿ ಪಂಚರ ಸಹಿಯನ್ನು ಪಡೆದುಕೊಂಡು ಮಾನ್ಯ ತನಿಖಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಉದ್ಘೋಷಣೆ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಸದರಿ ಪಂಚನಾಮೆಯನ್ನು ನಿಪಿ-೧೩ ಎಂದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-೧೩(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ. ಆಳಂದ.